683

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಅಖ್ರೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಅಖ್ರೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕರವಾಗಿಯೂ ಸದರೀ ಜಮ್ರ್ಮಾ ಛುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರು ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮುಛತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ತ್ ಕೊಡುವದಕ್ಕೆ ಮುಂಚೆ ಜಮ್ರ್ಮಾನಲ್ಲಿ ಇರುವ ಸಾಗುವಳಿ ಲಾಯಕ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರು.	ಪರಖಾಸ್ತುದಾರನ ಹೆಸರು.	ಜಮ್ರ್ಮಾ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ಪರಖಾಸ್ತು ಜಮೀನಿನ್ನ		ಷರಾ.
				ಎಸ್ಟೇರ್ಣ.	ಆಕಾರ.	
ಯಲಿವಾಳಲು ಅಡಗೆ ಪೈಕಿ 121ನೇ ಪೈಕಿ. ಇದೇ ಪೈಕಿ.	ಕೊಂಡ ನಿಜ್ಜಪ್ಪು ಮಿಸ್ಸರ್ ಸಿ. ಎಚ್. ಪ್ರೊಸೀನ್ ಸಹೆಬರವರು.	ಮೆಗ್ಗುಂಡ ಹೊಲಯ್ಯ ಅಡಗೆಪ್ಪ ಸಾ|| ಹಳ್ಳಿಯವರು	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100–38	100 ಅಥವಾ 150 ರೂಪಾಯಿಗಳು.	ಅಖ್ರೈರು ಪರಖಾಸ್ತುದಾರನ ಖಾಯಿಷ್ಕ ನಂಬಿ ಅಕಾರ ಡಾಖಲು ಮಾಡಿಸಿಕೊಂಡಿದ್ದಾನೆ.
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಬ್ಜಾ ಆಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮ್ರ್ಮಾ ಹಿಡುವಳೀದಾರನು ಬದ್ಧವಾಗಿರಬೇಕು.

ಟಿ. ವಿಯರ್,
ಡೆಪ್ಯೂಟಿ ಕಮ್ಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಾನಾಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೊಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ. ಇಷ್ಟವುಳ್ಳವರು ಕ್ರಯಕ್ಕೆ ಪಡಿಯಬಹುದು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ನೋಟಿಸ್.

ಈ ಕೆಳಗೆ ನಮೂದಿಸಿರುವ ಪುಸ್ತುಕವು ಬೆಂಗಳೂರು ಗವರ್ಮೆಂಟ್ ಸೆಂಟ್ರಲ್ ಬುಕ್ಡಿಪೋನಿನಲ್ಲಿ ದೊರಿಯುತ್ತದೆ.

1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟಿಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹ್ಯೆ,
ಕ್ಯೂರೇಟರ್.

ನೋಟಿಸ್.

ಜನಗಳ ಉಪಯೋಗಕ್ಕೊಸ್ಕರ ನೇತ್ರಗಳಿಗೆ ಅವುಷಧಿ ಹಾಕತಕ್ಕ ಬಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕಜೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜ್ಯನ್ ಎಸ್. ವಿ. ರಾಮಸ್ವಾಮಿ ಅಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಿಗ್ಯೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬ್ರೆಸ್ಟೆ, ಎಂ. ಬಿ.,
ಸೀನಿಯರ್ ಸರ್ಜನ್ ಯು ಸ್ಯಾನಿಟೆರಿ ಕಮ್ಮಿಷನರ್,
ಮೈಸೂರ್ ಗವರ್ಮೆಂಟ್.